ದಿನಾಂಕಃ 19.01.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಡಿ.ಜಿ.ಪಿ. ವಕೀಲರಿಂದ ಃ

ನಾನು ವಾರ್ಡ್ ಸಂಖ್ಯೆಃ 18 ರಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದೆ, ಸದರಿ ವಾರ್ಡ್‌ಗಳಲ್ಲಿ ಎರಡು ಮತಗಟ್ಟೆಗಳಿದ್ದವು. ಮತಗಟ್ಟೆ ಸಂಖ್ಯೆಃ 35 ರಲ್ಲಿ ನನಗೆ 155 ಮತಗಳು ಬಂದಿದ್ದವು, ಮತಗಟ್ಟೆ ಸಂಖ್ಯೆಃ 36 ರಲ್ಲಿ 388 ಮತಗಳು ನನಗೆ ಬಂದಿದ್ದವು. ಮತ ಎಣಿಕೆ ಸಂದರ್ಭದಲ್ಲಿ ನಾನು, ನನ್ನ ಮಾವ ಶಿವಣ್ಣ ಮತ್ತು ನಮ್ಮ ಏಜೆಂಟ್ ನಾರಾಯಣ್ ಮೂರು ಜನರು ಹಾಜರಿದ್ದೆವು. ಮತಗಳ ಎಣಿಕೆ ಮುಗಿದ ನಂತರ ನನಗೆ ಒಟ್ಟು ಎರಡೂ ಮತಗಟ್ಟೆಗಳಿಂದ ಒಟ್ಟು 532 ಮತಗಳು ಬಂದಿವೆ ಎಂದು ಚುನಾವಣಾಧಿಕಾರಿಗಳು ತಿಳಿಸಿ ನೀವೇ ಗೆದ್ದಿದ್ದೀರಿ ಎಂದು ಹೇಳಿದರು. 1ನೇ ಎದುರುದಾರರಿಗೆ 520 ಮತಗಳು ಬಂದಿವೆ ಎಂದು ಹೇಳಿದರು. ನಿಪಿ.3 ರಲ್ಲಿ ನಮ್ಮ ಮಾವ ಶಿವಣ್ಣನವರು ಸಹಿ ಮಾಡಿದ್ದಾರೆ ಎನ್ನುವುದು ಸರಿ. ನಿಪಿ.3 ರಲ್ಲಿ ಬರೆದಿರುವ ಮತಗಳ ಸಂಖ್ಯೆಯನ್ನು ಪರಿಶೀಲಿಸಿ ನಂತರ ನಮ್ಮ ಮಾವನವರು ನಿಪಿ.3ಕ್ಕೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. 1ನೇ ಎದುರುದಾರರು ಚುನಾವಣೆಯಲ್ಲಿ ಗೆದಿದ್ದಾರೆ ಎಂದು ಘೋಷಣೆ ಮಾಡ್ಲಿ 15 ನಿಮಿಷದ ಒಳಗೆ ನಾವು ಮೌಖಿಕವಾಗಿ ಚುನಾವಣಾಧಿಕಾರಿಗೆ ದೂರು ನೀಡಿದ್ದೇವೆ. ಆದರೆ ಅವರು ನಮಗೆ ಸ್ಪಂದಿಸಲಿಲ್ಲ. ಚುನಾವಣೆ ಫಲಿತಾಂಶ ಪ್ರಕಟವಾದ ನಂತರ ನಾವು ಚುನಾವಣಾಧಿಕಾರಿಗಳಿಗೆ ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚುನಾವಣಾ ಫಲಿತಾಂಶ ಬೆಳಿಗ್ಗೆ 8.30 ರಿಂದ 8.45 ಗಂಟೆಯೊಳಗೆ ಪ್ರಕಟಿಸಲಾಯಿತು. ಫಲಿತಾಂಶ ಪ್ರಕಟವಾದ ನಂತರ ನಾವು ಮದ್ಯಾಹ್ನ 1.00 ಗಂಟೆಗೆ ದೂರನ್ನು ನೀಡಿದ್ದೇವೆ ಎಂದರೆ ಸಾಕ್ಷಿಯು 12.30 ಗಂಟೆ ಸುಮಾರಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಿಪಿ.7 ರಂತೆ ಚುನಾವಣಾಧಿಕಾರಿಗೆ ದೂರು ಸಲ್ಲಿಸಿ ನಂತರ ಜಿಲ್ಲಾಧಿಕಾರಿಗಳ ಬಳಿ ಹೋಗಿದ್ದೇವೆ. ಜಿಲ್ಲಾಧಿಕಾರಿಗಳು ನಿಪಿ.8 ರಂತೆ ನಮಗೆ ಹಿಂಬರಹ ನೀಡಿದ್ದು, ಅದರಲ್ಲಿಯೂ ಸಹ ನಾವು ದಿಃ 03.09.2018 ರಂದು ಮದ್ಯಾಹ್ನ 1.00 ಗಂಟೆಗೆ ದೂರು ಸಲ್ಲಿಸಿರುವ ಬಗ್ಗೆ ನಮೂದಿಸಲಾಗಿದೆ ಎಂದರೆ, ನಾವು 12.30 ಗಂಟೆಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಿಪಿ.2 ರಲ್ಲಿ ನಮ್ಮ ಪರ ಮತ ಎಣಿಕೆ ಏಜೆಂಟ್ ಹೆಚ್. ನಾರಾಯಣ ಸಹಿ

ಮಾಡಿದ್ದಾರೆ ಎಂದರೆ ಸರಿ. ನಿಪಿ.3 ರಲ್ಲಿ ನಮ್ಮ ಪರ ಏಜೆಂಟ್ ನಮ್ಮ ಮಾವ ಶಿವಣ್ಣನವರು ಸಹಿ ಮಾಡಿದ್ದಾರೆ ಎಂದರೆ ಸರಿ. ಮತ ಎಣಿಕೆ ಕ್ರಮಬದ್ಧವಾಗಿ ನಡೆದಿದೆ ಎಂದು ನಿಪಿ.2 ಮತ್ತು ನಿಪಿ.3ಕ್ಕೆ ನಮ್ಮ ಪರ ಹಾಜರಿದ್ದ ಏಜೆಂಟರವರು ಸಹಿ ಮಾಡಿದ್ದಾರೆ ಎಂದರೆ, ಸಹಿ ಮಾಡಿರುತ್ತಾರೆ ಆದರೆ ಮತಗಳ ಸಂಖ್ಯೆಯನ್ನು ಪರಿಶೀಲಿಸದ ಸಹಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ.3 ರಲ್ಲಿ ನಮೂದಿಸಿರುವಂತೆ ಮತಗಟ್ಟೆ ಸಂಖ್ಯೆ: 36 ರಲ್ಲಿನ ನಗೆ 365 ಮತಗಳು ಬಂದಿದ್ದು, 1ನೇ ಎದುರುದಾರರಿಗೆ 388 ಮತಗಳು ಬಂದಿದ್ದು, ಅದನ್ನು ಒಪ್ಪಿ ನಮ್ಮ ಮಾವ ನಿಪಿ.3 ಕ್ಕೆ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು 388 ಮತಗಳು ನನಗೆ ಬಂದಿದ್ದು, 1ನೇ ಎದುರುದಾರರಿಗೆ 365 ಮತಗಳು ಬಂದಿದ್ದು, ನಿಪಿ.3 ದಾಖಲೆ ಭರ್ತಿ ಮಾಡುವಾಗ ಚುನಾವಣಾಧಿಕಾರಿಗಳು ತಪ್ಪಾಗಿ 1ನೇ ಎದುರುದಾರರಿಗೆ 388 ಎಂದು ತಪ್ಪಾಗಿ ನಮೂದಿಸಿರುತ್ತಾರೆ, ಅದೇ ರೀತಿ ನನ್ನ ಹೆಸರಿಗೆ 388 ಮತಗಳನ್ನು ದಾಖಲಿಸುವ ಬದಲು ತಪ್ಪಾಗಿ 365 ಮತಗಳು ಎಂದು ದಾಖಲಿಸಿರುತ್ತಾರೆ ಎಂದು ಹೇಳುತ್ತಾರೆ. ಮತ ಎಣಿಕೆ ಕಾರ್ಯ ಕ್ರಮಬದ್ಧವಾಗಿ ನಡೆದಿದ್ದು, ಆ ಕಾರಣದಿಂದ ನಮ್ಮ ಮಾವ ಶಿವಣ್ಣನಮ ನಿಪಿ.3 ಕ್ಕೆ ಒಪ್ಪಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಸಕಾರಣವಿಲ್ಲದೆ ಸುಳ್ಳು ಅರ್ಜಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿಜೆಎಂ., ಚಾಮರಾಜನಗರ.